ದಿನಾಂಕ 15-07-2023 ರಂದು ಆರ್.ಡಬ್ಲ್ಯು-1 ರವರನ್ನು ಮರಳಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಅನುಮತಿ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ ಎ.ಕೆ.ಬಿ ವಕೀಲರಿಂದ**

ಆಂತರಿಕ ವಿಚಾರಣೆಯ ಸಮಯದಲ್ಲಿ ಹಾಜರುಪಡಿಸಿದ್ದ ಮೊಬೈಲ್ ಫೋನ್ ಗಳ ಬಿಲ್ಲು ಮತ್ತು ಕರೆವಿವರಗಳನ್ನು ಹಾಜರುಪಡಿಸಿದ್ದೇನೆ ಅವುಗಳೊಡನೆ ಸದರಿ ಕರೆ ವಿವರಗಳು ಇರುವ ಸಿಡಿ ಮತ್ತು ಸಾಕ್ಷ್ಯ ಅಧಿನಿಯಮ ಕಲಂ 65 ಬಿಯಡಿಯಲ್ಲಿನ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ. ಸದರಿ ಮೊಬೈಲ್ ಫೋನ್ ಗಳು ಬಿಲ್ಲು ಮತ್ತು ಕರೆ ವಿವರಗಳನ್ನು ನಿಶಾನೆ ಆರ್ - 39 ಮತ್ತು 40 ಎಂದು ಗುರುತಿಸಿತು.

**ಪಾಟಿಸವಾಲುಃ ಅರ್ಜಿದಾರರ ವಕೀಲರ ಪರ ಶ್ರೀ ಕೆ.ಬಿ.ಎ ವಕೀಲರಿಂದ**

ಇಂದು ಹಾಜರು ಮಾಡಿರುವ ನಿಶಾನೆ ಆರ್ -39 ಮತ್ತು 40 ಅನ್ನು ಆಂತರಿಕ ವಿಚಾರಣೆಯ ಸಮಯದಲ್ಲಿ ಆಡಳಿತ ಮಂಡಳಿಯವರು ನನ್ನ ಮುಂದೆ ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಅಡಿಯಲ್ಲಿನ ಪ್ರಮಾಣ ಪತ್ರವನ್ನು ಆಡಳಿತ ಮಂಡಳಿಯ ಆಂತರಿಕ ವಿಚಾರಣೆಯ ಸಮಯದಲ್ಲಿ ನನ್ನ ಮುಂದೆ ಹಾಜರುಪಡಿಸಿರುದಿಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ